# ಪ್ರಬೋಧಿನೀ ಗುರುಕುಲಮ್- ವರದಿ-2022-2023

**ಪ್ರಬೋಧಿನೀ ಗುರುಕುಲದ ವಾರ್ಷಿಕ ಚಟುವಟಿಕೆಗಳು ವೇದ ಶಿಕ್ಷಾ ವರ್ಗ ದಿಂದ ಆರಂಭಗೊಳ್ಳುತ್ತವೆ. ವರ್ಷಪೂರ್ತಿ ನಡೆದ ಚಟುವಟಿಕೆಗಳ ಸಂಕ್ಷಿಪ್ತ ವರದಿ ಇಂತಿದೆ.**

- **ವೇದ ಶಿಕ್ಷಾ ವರ್ಗ**

ಪ್ರಬೋಧಿನೀ ಟ್ರಸ್ಟ್ ಆಶ್ರಯದಲ್ಲಿ ಕಳೆದ 43 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬಂದ ವೇದಶಿಕ್ಷಾ ವರ್ಗವು ಈ ಬಾರಿ 30-03-2022 ರ ಬುಧವಾರದಂದು ಪಂಚಗವ್ಯ ಹೋಮ ಹಾಗು ದೀಕ್ಷೆಯ ಮೂಲಕ ಆರಂಭಗೊಂಡು, 09-04-2022 ರಂದು ಮುಕ್ತಾಯಗೊಂಡಿತು.ಈ ವರ್ಗದಲ್ಲಿ ಕರ್ನಾಟಕದ 18 ಜಿಲ್ಲೆಗಳ 27 ಸ್ಥಾನಗಳ ಒಟ್ಟು 49 ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ವಾರ್ಷಿಕ ವಿರಾಮದ ನಂತರ ಮೇ 07 ರಂದು ಗುರುಕುಲ ಪುನರಾರಂಭವಾಯಿತು.**

- **ಪೂರ್ವ ಛಾತ್ರ ಬೈಠಕ್- ಮೇ - 29**

ಮೇ ತಿಂಗಳಿನಲ್ಲಿ ಅಂತ್ಯದಲ್ಲಿ ನಡೆದ ಪೂರ್ವಛಾತ್ರ ಸಭೆಯಲ್ಲಿ ಸಂಘದ ಹಿರಿಯ ಪ್ರಚಾರಕರಾದ ಶ್ರೀ **ಸು.ರಾಮಣ್ಣನವರು** ಹಾಗೂ ಶಿವಮೊಗ್ಗ ವಿಭಾಗದ ಪ್ರಚಾರ ಪ್ರಮುಖರಾದ **ಶ್ರೀ ಮಧುಕರ** ರವರು ಉಪಸ್ಥಿತರಿದ್ದು ಅವಧಿಗಳನ್ನು ನಡೆಸಿಕೊಟ್ಟರು

- **ಯೋಗ ಸಪ್ತಾಹ ಜೂನ್ 15 ರಿಂಅ ಜೂನ್ 21**

ಪ್ರತೀ ವರ್ಷದಂತೆಯೇ ಈ ವರ್ಷವೂ ಸಹ ವಿಶ್ವ ಯೋಗ ದಿನ ವನ್ನು ಅರ್ಥವತ್ತಾಗಿ ಆಚರಿಸಲಾಯಿತು. ಸುತ್ತಮುತ್ತಲಿನ ಮೂರು ಪ್ರೌಢಶಾಲೆ ಹಾಗೂ ನಾಲ್ಕು ಹಿರಿಯ ಪ್ರಾಥಮಿಕ ಶಾಲೆಗಳ ಏಳುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಯೋಗ ಸಪ್ತಾಹವನ್ನು ನಡೆಸಲಾಯಿತು. ಜೂನ್ ಇಪ್ಪತ್ತೊಂದರಂದು ಗುರುಕುಲದಲ್ಲಿ ವಿಶ್ವ ಯೋಗ ದಿನಾಚರಣೆ ನಡೆಸಿದ್ದು ಕೊಪ್ಪದ ವೈದ್ಯ **ಡಾ|| ರವೀಶ ಕಾಮತ್** ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

- **ನೂತನ ಛಾತ್ರ ಪ್ರವೇಶೋತ್ಸವ -2022**

ದಿನಾಂಕ 19-06-2022 ರ ಭಾನುವಾರ ಹರಿಹರಪುರದ ಪ್ರಬೋಧಿನೀ ಗುರುಕುಲ ದಲ್ಲಿ ನೂತನ ಛಾತ್ರ ಪ್ರವೇಶೋತ್ಸವ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆ ನಡೆದ ಬ್ರಹ್ಮಕೂರ್ಚ ಹವನದ ಮೂಲಕ 22 ವಿದ್ಯಾರ್ಥಿಗಳನ್ನು ಗುರುಕುಲಕ್ಕೆ ಸೇರಿಸಿಕೊಳ್ಳಲಾಯಿತು. ಮಂಗಳೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ **ಸ್ವಾಮಿ ಜಿತಕಾಮಾನಂದ ಜೀ** ಯವರು ಹೊಸ ಮಕ್ಕಳಿಗೆ ಪ್ರಥಮ ಪಾಠ ಮಾಡಿದರು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಸ್ವಾಮಿ ಜಿತಕಾಮಾನಂದ ಜೀ .ಆಶೀರ್ವಚನ ನೀಡಿದರು. ಮುಖ್ಯಭಾಷಣವನ್ನು ಆರೆಸ್ಸೆಸ್ ನ ಅಖಿಲ ಭಾರತೀಯ ಕಾರ್ಯಕಾರಿ ಮಂಡಲಿಯ ಆಮಂತ್ರಿತ ಸದಸ್ಯರಾದ **ಶ್ರೀ ಕಜಂಪಾಡಿ ಸುಬ್ರಹ್ಮಣ್ಯ ಭಟ್** ರವರು ನಡೆಸಿಕೊಟ್ಟರು. ಯುವ ಉದ್ಯಮಿ, ಬೆಂಗಳೂರಿನ ಪ್ರಸಿದ್ಧ **ಜ್ಯಾಮಿತಿ ಆರ್ಕಿಟೆಕ್ಚರಲ್ ಸ್ಟುಡಿಯೋ ದ ಸಂಸ್ಥಾಪಕರೂ ಆದ ಶ್ರೀ ಹೆಚ್.ಸಿ ಆಶ್ರಯ್** ರವರು ಅಭ್ಯಾಗತರಾಗಿ ಆಗಮಿಸಿದ್ದರು. ಪ್ರಬೋಧಿನೀ ಟ್ರಸ್ಟ್ ನ ಸದಸ್ಯರು ಹಾಗೂ ಹಾಗೂ ಸುತ್ತಮುತ್ತಲಿನ ಗುರುಕುಲ ಬಂಧುಗಳು, ಗ್ರಾಮಸ್ಥರು ಉಪಸ್ಥಿತರಿದ್ದರು

- **N.I.O.S.** ಪರಿವೀಕ್ಷಕರ ಭೇಟಿ. ರಾಷ್ಟ್ರೀಯ ಮುಕ್ತ ವಿದ್ಯಾಲಯದ ಪರಿಯೋಜನೆಯಲ್ಲಿ **"ಭಾರತೀಯ ಜ್ಞಾನ ಪರಂಪರಾ"** ವಿಭಾಗದೊಂದಿಗೆ ಪ್ರಬೋಧಿನೀ ಗುರುಕುಲವನ್ನು ಸಂಯೋಜಿಸುವ ದೃಷ್ಟಿಯಿಂದ ಎನ್.ಐ.ಒ.ಎಸ್. ಬೆಂಗಳೂರು ವಿಭಾಗದಿಂದ ನಿಯೋಜಿಸಲ್ಪಟ್ಟ ಪರಿವೀಕ್ಷಕರ ಸಮಿತಿಯು ಜುಲೈ 26 ರಂದು ಗುರುಕುಲಕ್ಕೆ ಭೇಟಿ ನೀಡಿತು.

ಕರ್ನಾಟಕ ಮರಾಠಾ ಅಭಿವೃದ್ಧಿ ನಿಗಮದ ನಿರ್ದೇಶಕರಾದ **ಡಾ|| ಪ್ರಶಾಂತ್ ಪಾಗೋಜಿ,** ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ **ಪ್ರೊ|| ಭಾಸ್ಕರ್ ಭಟ್ ಜೋಷಿ** ಯವರು ಈ ಸಮಿತಿಯಲ್ಲಿದ್ದರು.

- **N.I.O.S.** ವತಿಯಿಂದ ಗೋಕರ್ಣದಲ್ಲಿ ಜುಲೈ 1 ಮತ್ತು 2 ರಂದು ನಡೆದ **ರಾಷ್ಟ್ರೀಯ ಸೆಮಿನಾರ್** ನಲ್ಲಿ ಪ್ರಬೋಧಿನೀ ಗುರುಕುಲದಿಂದ ಇಬ್ಬರು ಆಚಾರ್ಯರು ಪಾಲ್ಗೊಂಡಿದ್ದರು
- **ಜುಲೈ 13 ಗುರುಪೂಜೆ ಉತ್ಸವ**

  **ರಾಷ್ಟ್ರೀಯ** ಸ್ವಯಂಸೇವಕ ಸಂಘದ ಶ್ರೀ ಗುರುಪೂಜಾ ಉತ್ಸವ ವನ್ನು ಜುಲೈ 13 ರಂದು ಆಚರಿಸಿದ್ದು, ಹಾಸನ ವಿಭಾಗ ಸೇವಾ ಪ್ರಮುಖರಾದ **ಶ್ರೀ ರಾಜೇಂದ್ರಕುಮಾರ್** ರವರು ಬೌದ್ಧಿಕ್ ನಡೆಸಿಕೊಟ್ಟರು. ಹೊರಗಿನಿಂದ ಗುರುಕುಲಕ್ಕೆ ಬಂದು ಪಾಠ ಮಾಡುತ್ತಿರುವ ಅನೇಕ ಶಿಕ್ಷಕ, ವಿದ್ವಾಂಸರಿಗೆ ಅಂದು ಗುರುದಕ್ಷಿಣಾ ಸಮರ್ಪಣೆ ಮಾಡಲಾಯಿತು.
- **ಜುಲೈ 21 ರಂದು ಕಾಶಿ ವೀರಶೈವ ಮಹಾಪೀಠದ** ಪೂಜ್ಯ ಶ್ರೀ ಶ್ರೀ ಜಗದ್ಗುರು **ಡಾ|| ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾ ಸ್ವಾಮೀಜಿ** ಯವರು ಗುರುಕುಲಕ್ಕೆ ಆಗಮಿಸಿ ಆಶೀರ್ವಚನ ನೀಡಿದರು
- **ಜುಲೈ 27 ರಂದು** ಗುರುಕುಲ ಮಾರ್ಗದರ್ಶಕ ಮಂಡಳಿ ಹಿರಿಯರಾದ ಶ್ರೀ **ಟಿ ಎನ್ ಪ್ರಭಾಕರ** ರವರು ಗುರುಕುಲಕ್ಕೆ ಆಗಮಿಸಿದ್ದರು. ವಿದ್ಯಾರ್ಥಿಗಳು ರಚಿಸುವ ಮಾಸಿಕ ಕೈಬರಹ ಪತ್ರಿಕೆ **"ಸೌರಭ"** ದ ಬಿಡುಗಡೆಯನ್ನ ನಡೆಸಿಕೊಟ್ಟ ಶ್ರೀಯುತರು ನಂತರ **ಆಚಾರ್ಯರ ಜೊತೆ ಸಂವಾದ ನಡೆಸಿದರು.**
- **ಜುಲೈ 29 ರಿಂದ ಒಂದು ತಿಂಗಳು ಪೂರ್ತಿ ಶ್ರಾವಣ ಮಾಸವನ್ನು ಸಂಸ್ಕೃತ ಮಾಸ ಎಂದು ಆಚರಿಸಲಾಯಿತು**
- **ಆಗಸ್ಟ್ - 10 ರಂದು** ಹರಿಹರಪುರ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಪ್ರಬೋಧಿನೀ ಗುರುಕುಲದಲ್ಲಿ **ಇದು ಕಥಾ ಸಮಯ** ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. **ಕನ್ನಡ ಸಾಹಿತ್ಯ ಪರಿಷತ್ ಕೊಪ್ಪ ಘಟಕದ ಅಧ್ಯಕ್ಷರಾದ ಶ್ರೀಮತಿ ಚಂದ್ರಕಲಾ** ರವರು ಕಥಾ ಕಾರ್ಯಕ್ರಮ ನಡೆಸಿಕೊಟ್ಟರು.
- **ಆಗಸ್ಟ್ - 11 ರಕ್ಷಾ ಬಂಧನ ಕಾರ್ಯಕ್ರಮವನ್ನು** ಸುತ್ತಮುತ್ತಲಿನ **5 ಶಾಲೆಗಳಲ್ಲಿ ಆಚರಿಸಲಾಯಿತು** ಪ್ರತೀ ತಿಂಗಳೂ **ಮುಷ್ಠಿ ಧಾನ್ಯ** ನೀಡುವ **350** ಕ್ಕೂ ಹೆಚ್ಚು **ಮನೆಗಳನ್ನು** ಈ ಸಂದರ್ಭದಲ್ಲಿ ಸಂಪರ್ಕಿಸಲಾಯಿತು. **ಆಗಸ್ಟ್ -12 ರಂದು ರಕ್ಷಾ ಬಂಧನ ಉತ್ಸವ** ವನ್ನು ಗುರುಕುಲದಲ್ಲಿ ಆಚರಿಸಲಾಯಿತು. ರಕ್ಷಾ ಬಂಧನದ ಈ ಸಂದರ್ಭದಲ್ಲಿ **18 ಗ್ರಾಮಗಳ 1955 ಮನೆಗಳನ್ನು ಸಂಪರ್ಕಿಸಿ 5380 ಜನರಿಗೆ ರಕ್ಷೆ ಕಟ್ಟಾಲಾಯಿತು.**
- **ಆಗಸ್ಟ್ - 15 ಸ್ವಾತಂತ್ಯ ದಿನದ ಅಮೃತ ಮಹೋತ್ಸವದ** ನಿಮಿತ್ತವಾಗಿ ಸಂಗೊಳ್ಳಿ ರಾಯಣ್ಣನ ನಾಟಕವನ್ನು ಪ್ರತಿಭಾ ಗಣದ ವಿಧ್ಯಾರ್ಥಿಗಳು ಮಾಡಿದರು. ಈ ನಾಟಕ ಪ್ರದರ್ಶನಕ್ಕಾಗಿ **ನೀನಾಸಂ** ನಿಂದ **ಶ್ರೀ ಉಮಾ ಮಹೇಶ್ವರ** ರವರು 15 ದಿನಗಳ ಕಾಲ ಗುರುಕುಲದಲ್ಲೇ ವಾಸವಾಗಿದ್ದು ವಿದ್ಯಾರ್ಥಿಗಳಿಗೆ ನಾಟಕದ ತರಬೇತಿ ನೀಡಿದರು. **ಅಂದು ಕೊಪ್ಪ ಲಯನ್ಸ್ ಕ್ಲಬ್ ನ ವತಿಯಿಂದ ಗುರುಕುಲದ ಆವರಣದಲ್ಲಿ ವನಮಹೋತ್ಸವ ಕಾರ್ಯಕ್ರಮ ನಡೆಯಿತು.**
- **ಆಗಸ್ಟ್ - 22 ರಂದು** ಪ್ರಬೋಧಿನೀ ಗುರುಕುಲಕ್ಕೆ ಅಖಿಲ ಭಾರತ ಸಾಹಿತ್ಯ ಪರಿಷತ್ ನ ರಾಜ್ಯಾಧ್ಯಕ್ಷರಾದ ಡಾ|| **ನಾ. ಮೊಗಸಾಲೆ** ಯವರು ಭೇಟಿ ನೀಡಿ, ವಿದ್ಯಾರ್ಥಿಗಳು ಹಾಗೂ ಆಚಾರ್ಯವೃಂದದವರೊಂದಿಗೆ ಸಮಾಲೋಚನೆ ನಡೆಸಿದರು.
- **ಪಾಲಕ ಪ್ರಶಿಕ್ಷಣ ದಿನಾಂಕ 4-9-2022 ರಂದು ಪ್ರಬೋಧಿನೀ ಗುರುಕುಲದ ಪಾಲಕ ಪ್ರಶಿಕ್ಷಣ ವರ್ಗ ನಡೆಯಿತು.** ಬೆಳಿಗ್ಗೆ 10 ಗಂಟೆಯ ಉದ್ಘಾಟನೆಯೊಂದಿಗೆ ಆರಂಭವಾದ ಪ್ರಶಿಕ್ಷಣವು ಗಣಶಃ ಅವಧಿಗಳು ಹಾಗೂ ಸಾಮೂಹಿಕ ಅವಧಿಗಳನ್ನೊಳಗೊಂಡಿತ್ತು. ಉತ್ತಮ ದಿನಚರಿ, ದೇಶಭಕ್ತಿಯ ನೈಜ ಸ್ವರೂಪ, ಸ್ವಾವಲಂಬಿ ಗ್ರಾಮ, ಭಾರತೀಯ ಇತಿಹಾಸ, ನಮ್ಮ ಮನೆ, ಆಹಾರ ಮತ್ತು ಆರೋಗ್ಯ, ಮುಂತಾದ ವಿಷಯಗಳೊಂದಿಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ವಿಶೇಷ ಅವಧಿಗಳು ನಡೆದವು. **ಸಂಘದ ಪ್ರಚಾರಕರಾದ ಡಾ| ರವೀಂದ್ರ ಹುಬ್ಬಳ್ಳಿ, ಶ್ರೀ**

**ನಾರಾಯಣ ಶೇವಿರೆ, ಮಣಿಪಾಲದ ಆಯುರ್ವೇದ ವೈದ್ಯ ಡಾ| ಶ್ರೀಪತಿ ಅಡಿಗ, ತೀರ್ಥಹಳ್ಳಿಯ ಶ್ರೀ ಲೋಹಿತಾಶ್ವ, ಪೂರ್ವಛಾತ್ರ ಡಾ| ಸುಶ್ರುತ** ಹಾಗೂ ಗುರುಕುಲದ ಅನೇಕ ಆಚಾರ್ಯರು ಪ್ರಶಿಕ್ಷಣದಲ್ಲಿ ಅವಧಿ ತೆಗೆದುಕೊಂಡರು..

- **ಕನ್ನಡ ಸಂಘ ಕಾಂತಾವರ ಸನ್ಮಾನ:** ನಾಡಿನ ಪ್ರತಿಷ್ಠಿತ ಸಂಸ್ಥೆ ಕನ್ನಡ ಸಂಘ ಕಾಂತಾವರ ವು ಪ್ರತೀ ವರ್ಷ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ನೀಡುವ **"ಸಾಂಸ್ಕೃತಿಕ ಏಕೀಕರಣ"** ಪ್ರಶಸ್ತಿಯನ್ನು ನವೆಂಬರ್ 1 ಕ್ಕೆ ಈ ಬಾರಿ ಪ್ರಬೋಧಿನೀ ಟ್ರಸ್ಟ್ ಗೆ ನೀಡಿತು. ಈ ಸಂದರ್ಭದಲ್ಲಿ **ನಿರ್ವಾಹಕ ವಿಶ್ವಸ್ತ ಶ್ರೀ ರಾಜಗೋಪಾಲ್** ಹಾಗೂ ಟ್ರಸ್ಟ್ ನ ಸದಸ್ಯರು ಉಪಸ್ಥಿತರಿದ್ದು ಸನ್ಮಾನ ಸ್ವೀಕರಿಸಿದರು.
- **ನವೆಂಬರ್ -4/5/6 ರಂದು ಬೆಂಗಳೂರಿನ** ಜನಸೇವಾ ವಿದ್ಯಾಕೇಂದ್ರದ ಪರಿಸರದಲ್ಲಿ ನಡೆದ **ರಾಷ್ಟ್ರೀಯ ವಿರಾಟ್ ಗುರುಕುಲ** ಸಂಗೋಷ್ಠಿಯಲ್ಲಿ ಪ್ರಬೋಧಿನೀ ಗುರುಕುಲದ ವಿದ್ಯಾರ್ಥಿಗಳು ಹಾಗೂ & ಆಚಾರ್ಯ ವರ್ಗದವರು ಭಾಗವಹಿಸಿದ್ದರು. ವಿಶೇಷವಾಗಿ ಪ್ರದರ್ಶಿನಿಯಲ್ಲಿ ಕೃಷಿ & ಯೋಗ ವಿಭಾಗದ chart, models ಗಳನ್ನು ತಯಾರಿಸಿದ್ದರು.
- **ದಿನಾಂಕ 20-11-2022 ರ ಭಾನುವಾರದಂದು** ಬೆಂಗಳೂರಿನ ಖ್ಯಾತ ಯೋಗ ತರಬೇತುದಾರರೂ, ಅಂತರಾಷ್ಟ್ರೀಯ ಆರ್ಯಭಟ ಪ್ರಶಸ್ತಿ ಪುರಸ್ಕೃತ ಸಾಧಕರೂ ಆದ **ಶ್ರೀ ವಿರೂಪಾಕ್ಷ ಬೆಳವಾಡಿ** ಯವರ ನೇತೃತ್ವದಲ್ಲಿ **"ಯೋಗಕ್ಷೇಮ ಯೋಗ ಕೇಂದ್ರ (ರಿ)" ಅರಿವು (ಮಾಸಕ್ಕೊಂದು ಉಪನ್ಯಾಸ)** ಕಾರ್ಯಕ್ರಮದ ಅಂಗವಾಗಿ **"ಗುರುಕುಲ ಪರಿಚಯ ಕಾರ್ಯಕ್ರಮ"** ನೆರವೇರಿತು. ಈ ಕಾರ್ಯಕ್ರಮದಲ್ಲಿ ಪ್ರಬೋಧಿನೀ ಗುರುಕುಲದ ವ್ಯವಸ್ಥಾಪಕರಾದ ಶ್ರೀ ಉಮೇಶ್ ರಾವ್ ರವರು ಗುರುಕುಲ ಶಿಕ್ಷಣದ ಪ್ರಸ್ತುತತೆಯ ಬಗ್ಗೆ ಮಾಹಿತಿ ನೀಡಿದರು.ಪ್ರಬೋಧಿನೀ ಗುರುಕುಲದಲ್ಲಿ ಅಧ್ಯಯನ ಪೂರೈಸಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ಪ್ರವೃತ್ತರಾಗಿರುವ ಹಿರಿಯ ವಿದ್ಯಾರ್ಥಿಗಳು ತಮ್ಮ ಗುರುಕುಲ ಶಿಕ್ಷಣದ ಅನುಭವವನ್ನು ಹಂಚಿಕೊಂಡರು. ಪ್ರಬೋಧಿನೀ ಟ್ರಸ್ಟ್ ನ ವಿಶ್ವಸ್ತರಾದ **ಶ್ರೀ ಸುಮಂತ ಶೆಟ್ಟಿ** ಯವರು ಉಪಸ್ಥಿತರಿದ್ದು ಹಿತನುಡಿಗಳನ್ನಾಡಿದರು.
- **ಭಗವದ್ಗೀತಾ ಅಭಿಯಾನ: ಗೀತಾ ಜಯಂತಿ ನಿಮಿತ್ತ ನವಂಬರ್** - 30 ರಿಂದ 7 ದಿನಗಳ ಪರ್ಯಂತ ಭಗವದ್ಗೀತಾ ಅಭಿಯಾನ ನಡೆಸಲಾಯಿತು ಸುತ್ತಮುತ್ತಲಿನ 4 ಶಾಲೆಗಳಲ್ಲಿ **.300 ಮಕ್ಕಳು ಭಾಗವಹಿಸಿ ಭಗವದ್ಗೀತಾ ಅಧ್ಯಯನದಲ್ಲಿ ನಿರತರಾದರು**
- **ಪೂರ್ವ ಛಾತ್ರ ಕುಟುಂಬ ಮಿಲನ್ ಡಿಸೆಂಬರ್ 17 & 18.**

ಪ್ರಬೋಧಿನೀ ಗುರುಕುಲದಲ್ಲಿ ಅಧ್ಯಯನ ಪೂರೈಸಿ ಗೃಹಸ್ಥರಾಗಿರುವ ಪೂರ್ವಛಾತ್ರರಿಗಾಗಿ **"ಪೂರ್ವಛಾತ್ರ ಕುಟುಂಬಮಿಲನ"** ಡಿಸೆಂಬರ್ 17 & 18 ರಂದು ಪ್ರಬೋಧಿನೀ ಗುರುಕುಲದ ಪರಿಸರದಲ್ಲಿ ನಡೆಯಿತು.ಡಿಸೆಂಬರ್ 17 ರ ರಾತ್ರಿ ಶ್ರೀ ವಿಶ್ವಂಭರ ಸನ್ನಿಧಿಯಲ್ಲಿ ದೀಪೋತ್ಸವ ಕಾರ್ಯಕ್ರಮ ನಡೆಯಿತು. **ಕುಟುಂಬ ಪ್ರಬೋಧನ ಪ್ರಾಂತ ಸಹ ಸಂಯೋಜಕರಾದ ಶ್ರೀ ರಮೇಶ್** ರವರು ಕಾರ್ಯಕ್ರಮದಲ್ಲಿ ದೀಪದ ಮಹತ್ವವನ್ನು ತಿಳಿಸಿಕೊಟ್ಟರು. ಡಿಸೆಂಬರ್18 ರಂದು ಉದ್ಘಾಟನಾ ಕಾರ್ಯಕ್ರಮವನ್ನು ವೇದಘೋಷದೊಂದಿಗೆ ಆರಂಭಿಸಲಾಯಿತು. **ಮೈಸೂರಿನ ಆಯುರ್ವೇದ ತಜ್ಞರಾದ ಡಾ|| ಜಯಶ್ರೀ** ಯವರು ಉದ್ಘಾಟನಾ ಕಾರ್ಯಕ್ರಮ ನಡೆಸಿಕೊಟ್ಟರು. **ಯೂತ್ ಫ಼ಾರ್ ಸೇವಾ ದ ಸಂಸ್ಥಾಪಕರಾದ ಬೆಂಗಳೂರಿನ ಶ್ರೀ ವೆಂಕಟೇಶಮೂರ್ತಿ, ಮೈಸೂರಿನ ಆರೋಗ್ಯ ಭಾರತಿಯ ಕಾರ್ಯಕರ್ತರಾದ ಡಾ|| ಚಂದ್ರಶೇಖರ್, ಡಾ|| ಜಯಶ್ರೀ, ಕುಟುಂಬ ಪ್ರಬೋಧನ್ ಪ್ರಾಂತ ಸಹ ಸಂಯೋಜಕರಾದ ಶ್ರೀ ರಮೇಶ್, ಗುರುಕುಲದ ವ್ಯವಸ್ಥಾಪಕರಾದ ಶ್ರೀ ಉಮೇಶ್ ರಾವ್** ಮೊದಲಾದವರು ವಿವಿಧ ಅವಧಿಗಳಲ್ಲಿ ಉಪಸ್ಥಿತರಿದ್ದು ಸಮಾಲೋಚನೆ ನಡೆಸಿದರು.

ಸಮಾರೋಪ ಕಾರ್ಯಕ್ರಮದಲ್ಲಿ **ಶ್ರೀ ರಮೇಶ್** ರವರು ಕೌಟುಂಬಿಕ ಮೌಲ್ಯಗಳ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು **ಪ್ರಬೋಧಿನೀ ಟ್ರಸ್ಟ್ ನ ನಿರ್ವಾಹಕ ವಿಶ್ವಸ್ತರಾದ ಶ್ರೀ ಹೆಚ್.ಬಿ.ರಾಜಗೋಪಾಲ್** ವಹಿಸಿದ್ದರು. ಮಧ್ಯಾಹ್ನದ ಭೋಜನದೊಂದಿಗೆ ಕಾರ್ಯಕ್ರಮ ಸಮಾಪನಗೊಂಡಿತು.

- **ಡಿಸೆಂಬರ್ 24 ರಿಂದ 31 ಒಂದು ವಾರದ ಕಾಲ ಕೌಜಲಗಿಯಲ್ಲಿ ನಡೆದ ಕೃಷಿ - ಗೊ ಉತ್ಪನ್ನಗಳ ತಯಾರಿಕೆಯ ತರಬೇತಿ** ಶಿಬಿರದಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿ ವಿಶೇಷ ತರಬೇತಿಯನ್ನು ಪಡೆದುಕೊಂಡು ಬಂದರು.
- ಜನವರಿ 1 ರ ಸಂಜೆ ಹರಿಹರಪುರದಲ್ಲಿ **"ಸುಧನ್ವಾರ್ಜುನ ಕಾಳಗ"** ಎಂಬ ಯಕ್ಷಗಾನ ತಾಳಮದ್ದಳೆಯನ್ನು ಹರಿಹರಪುರ ರೋಟರಿ ಕ್ಲಬ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಏರ್ಪಡಿಸಲಾಗಿತ್ತು. ವಿದ್ವಾನ್ ವಿನಾಯಕ ಭಟ್ಟ ಗಾಳಿಮನೆ, ವಿದ್ವಾನ್ ಕೇಶವ್ ಭಟ್, ಕೇಕಣಾಜೆ. ಶ್ರೀ ರಜನೀಶ ಹೊಳ್ಳ ರವರ ಅರ್ಥಗಾರಿಕೆ ಯುವ ಭಾಗವತ ದರ್ಶನ್ ಭಟ್ ಹಳುವಳ್ಳಿ ಹಾಗೂ ಸಂಗಡಿಗರ ಹಿಮ್ಮೇಳದಲ್ಲಿ ಈ ಕಾರ್ಯಕ್ರಮವು ಬಂದವರನ್ನು ರಂಜಿಸಿತು.
- **ಗಂಗಾಸಮಾರಾಧನೆ:** ದಿನಾಂಕ 11:02:2023 ರ ಸಂಜೆ ಪ್ರಬೋಧಿನೀ ಗುರುಕುಲಮ್ ನಲ್ಲಿ ಗಂಗಾ ಸ್ವಾಗತದೊಂದಿಗೆ **ಗಂಗಾಸಮಾರಾಧನೆ** ಆರಂಭವಾಯಿತು. ಅಂದು ಸಂಜೆ ಭಾರತಮಾತಾ ಪೂಜನದಲ್ಲಿ **ಸಂಘದ ದಕ್ಷಿಣ ಮಧ್ಯಕ್ಷೇತ್ರದ ಸಹ ಬೌದ್ಧಿಕ ಪ್ರಮುಖ ಶ್ರೀ ಗೋವಿಂದ** ರವರು ಮುಖ್ಯ ಭಾಷಣ ಮಾಡಿದರು. ದಿನಾಂಕ 12:02:2023 ರ ಬೆಳಿಗ್ಗೆ ತುಂಗಾ ತೀರ ದಲ್ಲಿ ಸಂಕಲ್ಪ ಸ್ನಾನದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಂತರ **ಶ್ರೀ ರಾಮತಾರಾಕ ಹೋಮ**ದ ಸಂಕಲ್ಪ ನಡೆದು,ಕಾರ್ಯಕ್ರಮದ ಮುಖ್ಯ ಭಾಷಣವನ್ನು **ಸಂಘದ ಅಖಿಲ ಭಾರತ ಸಂಪರ್ಕ ಪ್ರಮುಖ್ ಶ್ರೀ ರಾಮಲಾಲ್ ಜೀ** ನಡೆಸಿಕೊಟ್ಟರು. ನಂತರ ಗುರುಕುಲ ದ ಹಿರಿಯರಾದ **ಶ್ರೀ ಕಜಂಪಾಡಿ ಸುಬ್ರಹ್ಮಣ್ಯ ಭಟ್** ರವರು ಗುರುಕುಲ ನಡೆದುಬಂದ ಹಾದಿ, ವಿಕಾಸ ಹಾಗೂ ಬೆಳವಣಿಗೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು. ವೇದಿಕೆ ಮೇಲೆ ಆರೆಸ್ಸೆಸ್ ನ ಕರ್ನಾಟಕ, ಆಂಧ್ರ,ತೆಲಂಗಾಣ ಪ್ರಾಂತಗಳನ್ನೊಳಗೊಂಡ **ದಕ್ಷಿಣ ಮಧ್ಯಕ್ಷೇತ್ರದ ಸಹ ಬೌದ್ಧಿಕ ಪ್ರಮುಖ ಶ್ರೀ ಗೋವಿಂದ, ಪ್ರಬೋಧಿನೀ ಟ್ರಸ್ಟ್ ನ ಅಧ್ಯಕ್ಷ ಶ್ರೀ ರಾಜಗೋಪಾಲ್** ಉಪಸ್ಥಿತರಿದ್ದರು. ಕಾರ್ಯಕ್ರಮ ದಲ್ಲಿ ಆರೆಸ್ಸೆಸ್ ನ **ಕ್ಷೇತ್ರೀಯ ಪ್ರಚಾರಕ್ ಶ್ರೀ ಸುಧೀರ್, ಕರ್ನಾಟಕ ದಕ್ಷಿಣ ಪ್ರಾಂತದ ಸಹಪ್ರಾಂತ ಪ್ರಚಾರಕ್ ಶ್ರೀ ನಂದೀಶ, ಹಾಸನ ವಿಭಾಗ ಪ್ರಚಾರಕ್ ಶ್ರೀ ಚಿನ್ಮಯ, ಅಖಿಲ ಭಾರತ ಸಾಹಿತ್ಯ ಪರಿಷತ್ತಿನ ಕರ್ನಾಟಕ ರಾಜ್ಯ ಸಂಘಟಕ ಶ್ರೀ ನಾರಾಯಣ ಶೇವಿರೆ, ಪ್ರಬೋಧಿನೀ ಟ್ರಸ್ಟ್ ನ ಶ್ರೀ ಸುಮಂತ್ ಶೆಟ್ಟಿ, ಶ್ರೀ ವಿಜಯಕುಮಾರ್, ಶ್ರೀ ಭೀಮಣ್ಣ ಹಾಗೂ ಶ್ರೀ ವಿಶ್ವಜಿತ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.**
- **ಪಾಲಕ ಪ್ರಶಿಕ್ಷಣ :** ಮಾರ್ಚ್ 4 ಹಾಗೂ 5 ರಂದು ಗುರುಕುಲದಲ್ಲಿ ಪಾಲಕ ಪ್ರಶಿಕ್ಷಣ ನಡೆಯಿತು ಶನಿವಾರ ಮಧ್ಯಾಹ್ನ 2 ಘಂಟೆಗೆ ಪ್ರಶಿಕ್ಷಣವು ಉದ್ಘಾಟನೆಯಾಯಿತು. ಎರಡೂ ದಿನ ಪೂರ್ತಿ **ಭಾರತೀಯ ಕುಟುಂಬ ವ್ಯವಸ್ಥೆ, ಆಯುರ್ವೇದೀಯ ಜೀವನ ಪದ್ಧತಿ, ಧಾರ್ಮಿಕ ಮೌಲ್ಯಗಳು, ಸಾಮಾಜಿಕ ಕಾರ್ಯದ ಅವಶ್ಯಕತೆ, ಗುರುಕುಲ ಶಿಕ್ಷಣದ ಪ್ರಸ್ತುತತೆ** ಹೀಗೆ ಅನೇಕ ವಿಷಯಗಳ ಬಗ್ಗೆ, **ಡಾ.ರಾಮಚಂದ್ರ ಭಟ್ ಕೋಟೆಮನೆ, ಶ್ರೀನಿರ್ಮಲಕುಮಾರ್, ಶ್ರೀ ನಾರಾಯಣ ಶೇವಿರೆ, ಶ್ರೀ ಬಾಲಕೃಷ್ಣ ಮಲ್ಯ** ಮುಂತಾದ ಹಿರಿಯರ ಅವಧಿಗಳು ನಡೆದವು. ಭಾನುವಾರ ಮಧ್ಯಾಹ್ನ ಭೋಜನದೊಂದಿಗೆ ಪ್ರಶಿಕ್ಷಣವು ಮುಕ್ತಾಯವಾಯಿತು.
- ಪ್ರಬೋಧಿನೀ ಗುರುಕುಲದಲ್ಲಿ 2023-24 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಧ್ಯಯನ ಮಾಡಲು ಬಯಸಿ 103 ಅರ್ಜಿಗಳು ಬಂದಿದ್ದು, ಸಂದರ್ಶನ ಮುಗಿದಿರುತ್ತದೆ. ಇದೇ ಮಾರ್ಚ್ 31 ರಿಂದ 34 ವಿದ್ಯಾರ್ಥಿಗಳಿಗೆ ಆಯ್ಕೆ ಶಿಬಿರ ಆರಂಭಗೊಂಡಿದ್ದು ಅದರಲ್ಲಿ ಆಯ್ಕೆಯಾದವರು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಗುರುಕುಲಕ್ಕೆ ಸೇರ್ಪಡೆಗೊಳ್ಳುತ್ತಾರೆ.

************************